**<u>ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ</u>**

**<u>ಸಿಸಿ ನಂ.449/2018</u>**

**<u>ಚಾಸಾ-6/ಪಿಡಬ್ಲೂ-2</u>**

| | |
|---|---|
| **ಹೆಸರು** | ಪಲ್ಲಾ ಸತ್ಯಶೀಲರೆಡ್ಡಿ |
| **ತಂದೆ ಹೆಸರು** | ಭೀಮರೆಡ್ಡಿ |
| **ವಯಸ್ಸು** | 64 ವರ್ಷಗಳು |
| **ಉದ್ಯೋಗ** | ನಿವೃತ್ತ ಎಇಇ |
| **ವಾಸ ಸ್ಥಳ** | ಕಲಬುರಗಿ |

**<u>ದಿನಾಂಕ 04.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭೀಯೋಜಕರಿಂದ.</u>**

ದಿನಾಂಕ 05.07.2016 ರಿಂದ 17.10.2019 ರವರೆಗೆ ನಾನು ಎಇಇ ಆಗಿ ಪಿಡಬ್ಲುಡಿ ಇಲಾಖೆ ಜೇವರ್ಗಿಯಲ್ಲಿ ಕೆಲಸ ಮಾಡಿರುತ್ತೇನೆ.

ದಿನಾಂಕ 01.7.2018 ರಂದು ನೆಲೋಗಿ ಪಿ ಎಸ್ ಐ ರವರು ಇಟಗಾ ಗ್ರಾಮದ ಭೀಮಾ ನದಿಯ ದಂಡಯಲ್ಲಿರುವ ಸರಕಾರಿ ಜಾಗದಲ್ಲಿ ಜಪ್ತಿ ಮಾಡಿದ ಮರಳಿನ ಪರಿಮಾಣ ಮತ್ತು ಮೌಲ್ಯವನ್ನು ತಿಳಿಸಲು ತಮ್ಮ ಪತ್ರದಲ್ಲಿ ಕೋರಿದ ಮೇರೆಗೆ ಮರಳಿನ ಮೌಲ್ಯಮಾಪನ ಮಾಡಿರುತ್ತೇನೆ. ಸದರಿ ಮರಳು 117.00 ಘನ ಮೀಟರ್ ಅದರ ಮೌಲ್ಯ ರೂ.1,76,050/- ಇರುತ್ತದೆ. ಆ ಬಗ್ಗೆ ಮೌಲ್ಯಮಾಪನ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಈಗ ನಾನು ಸದರಿ ಪ್ರಮಾಣ ಪತ್ರವನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಪ್ರಮಾಣ ಪತ್ರದಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ 1ನೆ ಆರೋಪಿತರ ಪರ ವಕೀಲರಿಂದ</u>

ಮರಳು ಸಂಗ್ರಹಣೆ ಮಾಡಿದ ಚೆಕಬಂದಿ ನನಗೆ ಗೊತ್ತು. ನಾನು ಮರಳನ್ನು ಪರಿಶೀಲನೆ ಮಾಡದೇ ಸುಳ್ಳು ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರ ಕೋರಿಕೆ ಮೇರೆಗೆ ಸುಳ್ಳು ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 2ನೆ ಆರೋಪಿತರ ಪರ ವಕೀಲರು 1ನೆ ಆರೋಪಿ ಪರ ವಕೀಲರ ಪಾಟಿ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ ಮೇರೆಗೆ ಅಳವಡಿಸಿಕೊಳ್ಳಲಾಯಿತು.</u>

**ಮರು ವಿಚಾರಣೆಃ ಇಲ್ಲ**
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೆ.ಸರಿ.ಇದೆ

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ

**ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ.**

**ಸಿಸಿ ನಂ.449/2018**

**ಚಾಸಾ-5/ಪಿಡಬ್ಲೂ-3**

| | |
|---|---|
| **ಹೆಸರು** | ಬಸವರಾಜ |
| **ತಂದೆ ಹೆಸರು** | ಹಣಮಂತರಾಯ |
| **ವಯಸ್ಸು** | 39 ವರ್ಷಗಳು |
| **ಉದ್ಯೋಗ** | ಪೊಲೀಸ್ ಪೇದೆ |
| **ವಾಸ ಸ್ಥಳ** | ಜೇವರ್ಗಿ |

**ದಿನಾಂಕ 04.08.2025 ರಂದು ಸಾಕ್ಷಿಯನ್ನ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ.**

2015 ರಿಂದ 2020 ರವರೆಗೆ ನಾನು ನೆಲೋಗಿ ಯಡ್ರಾಮಿ ಠಾಣೆಯಲ್ಲಿ ಪೊಲೀಸ್ ಪೇದೆ ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 01.07.2018 ರಂದು ಮಧ್ಯಾಹ್ನ 2.30 ನಾನು, ಚಾಸಾ-1, 4 ರವರು ಸೇರಿ ಇಟಗಾ ಗ್ರಾಮದ ಸರ್ವೆ ನಂ.1 ರಲ್ಲಿ ಅಕ್ರಮವಾಗಿ ಮರಳು ಸಂಗ್ರಹಣೆ ಮಾಡಿರುತ್ತಾರೆ ಎಂದು ಬಾತ್ಮಿ ಬಂದ ಮೇರೆಗೆ ಎಸ್ ಪಿ ಮತ್ತು ಡಿ ವೈ ಎಸ್ ಪಿ ಕಲಬುರಗಿರವರ ಮಾರ್ಗದರ್ಶನದ ಮೇರೆಗೆ ಚಾಸಾ-2 ಮತ್ತು 3 ರವರನ್ನು ಪಂಚರನ್ನಾಗಿ ಕರೆದುಕೊಂಡು ದಾಳಿ ವಿಚಾರ ತಿಳಿಸಿ ಘಟನಾ ಸ್ಥಳಕ್ಕೆ ಹೋಗಿ ನೋಡಲಾಗಿ ಅಲ್ಲಿ ಟ್ರ್ಯಾಕ್ಟರಗಳ ಮುಖಾಂತರ ಮರಳು ಸಂಗ್ರಹಣೆ ಮಾಡುತ್ತಿದ್ದರು, ನಮ್ಮನ್ನು ನೋಡಿ ಟ್ರ್ಯಾಕ್ಟರ ಸಮೇತ ಇಬ್ಬರು ವ್ಯಕ್ತಿಗಳು ಓಡಿ ಹೋಗಿರುತ್ತಾರೆ. ಟ್ರ್ಯಾಕ್ಟರ ಮಾಲಿಕರು ಮತ್ತು ಚಾಲಕರ ಹೆಸರು ವಿಚಾರಿಸಲಾಗಿ ಅವರ ಹೆಸರು ಬಸಪ್ಪ ತಂದೆ ಶಂಕ್ರಪ್ಪ ಮತ್ತು ರಾಜೇಂದ್ರ ತಂದೆ ಶಿವಪ್ಪ ಹಣಮಂತಗೋಳ ಎಂದು ಗೊತ್ತಾಯಿತು. ನಂತರ ಚಾಸಾ-1 ರವರು ಪಂಚನಾಮೆಯನ್ನು ಮಧ್ಯಾಹ್ನ 3.00 ರಿಂದ 4.00 ರವರೆಗೆ ಪಂಚರ ಸಮಕ್ಷಮ ಜರುಗಿಸಿ ಅಂದಾಜು 25 ಟಿಪ್ಪರನಷ್ಟು ಮರಳನ್ನು ಜಪ್ತಿಪಡಿಸಿಕೊಳ್ಳಲಾಯಿತು. ಆನಂತರ ಚಾಸಾ-1 ರವರು ಜಪ್ತಿ ಪಂಚನಾಮೆಯೊಂದಿಗೆ ಠಾಣೆಗೆ ಬಂದು ಠಾಣಾಧಿಕಾರಿಗೆ ವರದಿಯೊಂದಿಗೆ ವಶಕ್ಕೆ ನೀಡಿರುತ್ತಾರೆ. ದಿನಾಂಕ 01.07.2018 ರಂದು ಘಟನೆ ಕುರಿತು ಹೇಳಿಕೆ ನೀಡಿರುತ್ತೇನೆ. ದಿನಾಂಕ 05.07.2018, 11.10.2018, 05.11.2015 ರಂದು ಆರೋಪಿತರ ಪತ್ತೆ ಕುರಿತು ಹೋಗಿರುತ್ತೇನೆ. ಆ ಕುರಿತು ವರದಿಗಳನ್ನು ನೀಡಿರುತ್ತೇನೆ.

ಪಾಟೀ ಸವಾಲುಃ 1ನೇ ಆರೋಪಿ ಪರ ವಕೀಲರಿಂದಃ

ಮರಳನ್ನು ಸಂಗ್ರಹಣೆ ಮಾಡಿದ ಜಮೀನಿನ ವಿಸ್ತೀರ್ಣ ನನಗೆ ಹೇಳಲು ಬರುವುದಿಲ್ಲ. ಮರಳು ತುಂಬುತ್ತಿದ್ದ ಟ್ರ್ಯಾಕ್ಟರ ನಂಬರ ನನಗೆ ಹೇಳಲು ಬರುವುದಿಲ್ಲ. ಘಟನೆ ದಿನ ಟ್ರ್ಯಾಕ್ಟರನ್ನು ಯಾರು ಚಾಲಾಯಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ.

ದಿನಾಂಕ 05.07.2018, 11.10.2018, 05.11.2015 ರಂದು ಆರೋಪಿತರ ಪತ್ತೆ ಕುರಿತು ಹೋಗಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ. ಆರೋಪಿತರು ಮರಳು ಸಂಗ್ರಹಣೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಚಾಸಾ-1 ರವರು ನನ್ನ ಮೇಲಾಧಿಕಾರಿಯಾಗಿರುವುದರಿಂದ ಅವರು ನೀಡಿದ ಸುಳ್ಳು ದೂರಿಗೆ ಅನುಗುಣವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ದಾಳಿ ಮಾಡಿದೆವು ಆಗ ಟ್ರ್ಯಾಕ್ಟರ ಚಾಲಕ ನಮ್ಮನ್ನು ನೋಡಿ ಓಡಿ ಹೋದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ಮರಳನ್ನು ವಶಪಡಿಸಿಕೊಂಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲದಿದ್ದರೂ ಸಹ ಸುಳ್ಳು ಹೇಳಿಕೆ ನೀಡಿ ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 1ನೇ ಆರೋಪಿ ಪರ ವಕೀಲರಿಂದಃ</u>

ಘಟನೆ ದಿನ ಟ್ರ್ಯಾಕ್ಟರನ್ನು ಯಾರು ಚಲಾಯಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿತರನ್ನು ನಾವು ಹಿಡಿಯಲು ಪ್ರಯತ್ನಿಸಿರುತ್ತೇವೆ.

ಮರು ವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ